## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

ಸಿ.ಸಿ.ನಂ. **2636/2024**

| | | |
|---|---|---|
| ಆರೋಪಿತರ ಹೆಸರು | : | ಶ್ರೀಮತಿ ಪ್ರತೀಕ್ಷಾ ಪ್ರಯಾಗ ಪಡ್ತಿ @ ತಾಳೇಕರ್ |
| ವಯಸ್ಸು | : | 40 ವರ್ಷ, |
| ಉದ್ಯೋಗ | : | ಗೃಹಿಣಿ, |
| ವಾಸ | : | 126 ಬೆರಗಲ್, ದೇವಳಮಕ್ಕಿ, ಕಾರವಾರ. |

### ಆಪಾದನೆ ಹೇಳಿಕೆ

ಪ್ರಸ್ತುತ ಪ್ರಕರಣದ ಆರೋಪಿತರಾದ ನೀವು ಫಿರ್ಯಾದಿ ಕಾರವಾರ ಚಿಟ್ಸ್ ಸಂಸ್ಥೆಯ ಸದಸ್ಯರಾಗಿದ್ದು ಫಿರ್ಯಾದಿ ಸೊಸೈಟಿಯಲ್ಲಿ ಸಾಲಗಾರರಾದ ಪ್ರಯಾಗ ರವರ ಜಾಮೀನುದಾರರಾಗಿದ್ದು ಅದರಂತೆ ಫಿರ್ಯಾದಿ ಸೊಸೈಟಿಯು ರೂ.2,06,597/- ಸಾಲವನ್ನು ಮಂಜೂರು ಮಾಡಿದ್ದು, ಹಾಗೂ ಸಾಲವನ್ನು ಮರುಪಾವತಿ ಮಾಡುವುದಾಗಿ ಹೇಳಿದ್ದು, ನೀವು ಸದ್ರಿ ಸಾಲವನ್ನು ವಾಪಸ್ಸು ಕಟ್ಟದೇ, ಫಿರ್ಯಾದಿಯು ಸದ್ರಿ ಸಾಲವನ್ನು ಮರು ಪಾವತಿ ಮಾಡಲು ಕೇಳಿದಾಗ ನೀವು ಚೆಕ್ ನಂ. 348198, ದಿನಾಂಕ 12-03-2024, ಕೆನರಾ ಬ್ಯಾಂಕ್, ಮಲ್ಲಾಪುರ ಶಾಖೆಯ ರೂ.2,06,597/-ಚೆಕ್ ನ್ನು ನೀಡಿದ್ದು, ಫಿರ್ಯಾದಿಯು ಸದ್ರಿ ಚೆಕ್ ನ್ನು ನಗದಿಕರಿಸಲು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ,ಕಾರವಾರ ಶಾಖೆಗೆ ಸಲ್ಲಿಸಿದಾಗ ಸದ್ರಿ ಬ್ಯಾಂಕಿನವರು "Funds Insufficient" ಎಂಬ ಹಿಂಬರಹ ನೀಡಿದ್ದು, ದಿನಾಂಕ 29-04-2024 ರಂದು ನೋಟೀಸು ನೀಡಿದ್ದು, 15 ದಿನಗಳ ಒಳಗೆ ಸದ್ರಿ ಸಾಲದ ಹಣವನ್ನು ಮರು ಪಾವತಿಸಲು ಕೇಳಿಕೊಂಡಿದ್ದರೂ ಸಹ ಚೆಕ್ಕಿನ ಹಣವನ್ನು ಪಿರ್ಯಾದಿಗೆ ಹಿಂದಿರುಗಿಸದೇ ಇರುವ ಅಪರಾಧಕ್ಕಾಗಿ ನೀವು 138 Negotiable Instrument Act ಅಡಿಯಲ್ಲಿ ಶಿಕ್ಷಿಸಲ್ಪಡುವ ಆಪಾದನೆಯನ್ನು ಎಸಗಿರುವಿರಿ ಎಂದು ಆಪಾದಿಸಲಾಗಿದೆ.

<u>ಆರೋಪಿಃ</u> ಶ್ರೀಮತಿ ಪ್ರತೀಕ್ಷಾ ಪ್ರಯಾಗ ಪಡ್ತಿ @ ತಾಳೇಕರ್

ಪ್ರಶ್ನೆಃ 1 ಈಗ ಓದಿ ಹೇಳಿದ ಆಪಾದನೆ ಕೇಳಿ ತಿಳಿಯಿತೇ?

ಉತ್ತರಃ

ಪ್ರಶ್ನೆಃ 2 ಈಗ ಓದಿ ಹೇಳಿದ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗ ಬಯಸುತ್ತೀರೋ?

ಉತ್ತರಃ

(ಸದ್ರಿ ಆಪಾದನೆಗಳನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು)

ಕಾರವಾರ
ದಿಃ 03-03-2025

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಕಾರವಾರ.